Date : 20-Oct-2008 Edition : Bangalore Page No.: 9 Page Name: n.a. Size: 1629.63 sq. cm

Sector: FMCG Circulation: 20690 AVE: Rs.325925.79 Frequency: Daily

Publication: Samyukta Karnataka Title: Complete meal for Rs 99 from Pizza Hut

# Samyukta Karnataka

## ಪಿಜ್ಜಾ ಹಟ್‌ನಿಂದ 99 ರೂ.ಗೆ ಸಂಪೂರ್ಣ ಭೋಜನ



ಬೆಂಗಳೂರು, ಅ. 19– ಪ್ರಸ್ತುತ ಹಬ್ಬದ ಸಾಲಿನಲ್ಲಿ ಅನೌಪಚಾರಿಕ ಭೋಜನ ರೆಸ್ಟೋರೆಂಟ್ ಪಿಜ್ಜಾ ಹಟ್ ಕುಟುಂಬದ ಪ್ರತಿ ವ್ಯಕ್ತಿಗೆ 99 ರೂ. ದರದಲ್ಲಿ ಸಂಪೂರ್ಣ ಭೋಜನ ನೀಡುವ ಮ್ಯಾಜಿಕ್ ಟೈಮ್ಸ್ ಕೊಡುಗೆಯನ್ನು ಸಾದರಪಡಿಸುತ್ತಿದೆ.

ಮ್ಯಾಜಿಕ್ ಟೈಮ್ಸ್ ಸ್ಪೆಷಲ್ಸ್ ಕೊಡುಗೆಯಲ್ಲಿ ಮೀಲ್ಸ್ ಫಾರ್ 2 ಮತ್ತು ಮೀಲ್ಸ್ ಫಾರ್ 4 ಎಂಬ ಕೊಡುಗೆಗಳಿವೆ. ಇವುಗಳಿಂದ ನೀವು ನಿಮ್ಮ ನೆಚ್ಚಿನ ಮೂರು ಶಾಖಾಹಾರಿ ಮತ್ತು 2 ಮಾಂಸಾಹಾರಿ ವೈಯಕ್ತಿಕ ಪ್ಯಾನ್ ಪಿಜ್ಜಾಗಳಲ್ಲಿನ ಆಯ್ಕೆ ಹಾಗೂ ಜತೆಗೆ ಗಾರ್ಲಿಕ್ ಬ್ರೆಡ್ ಮತ್ತು ಒಂದು ಪೆಪ್ಸಿ ಪಡೆಯಬಹುದು.

ಈ ಎರಡು ಸ್ಪೆಷಲ್ಸ್‌ಗಳಿಗೆ ಕ್ರಮವಾಗಿ 198 ಮತ್ತು 396 ರೂ. ದರ ನಿಗದಿ ಮಾಡಲಾಗಿದೆ. ಶಾಖಾಹಾರಿ ಮತ್ತು ಮಾಂಸಾಹಾರಿ ಎರಡೂ ಆಯ್ಕೆಗಳಿಗೂ ಒಂದೇ ಬೆಲೆ ಇರುತ್ತದೆ. ಮ್ಯಾಜಿಕ್ ಟೈಮ್ಸ್ ಕೊಡುಗೆ ದೇಶದಾದ್ಯಂತ ಎಲ್ಲ ಪಿಜ್ಜಾ ಹಟ್ ರೆಸ್ಟೋರೆಂಟ್‌ಗಳಲ್ಲಿ ಲಭ್ಯವಿದೆ.

ಮ್ಯಾಜಿಕ್ಸ್ ಟೈಮ್ಸ್ ಕೊಡುಗೆ ಕುರಿತ ಪಿಜ್ಜಾ ಹಟ್‌ನ ಮಾರುಕಟ್ಟೆ ನಿರ್ದೇಶಕ ಅನುಪ್ ಜೈನ್ ಅವರು ಮಾತನಾಡಿ, ಕುಟುಂಬಕ್ಕೆ ನೆನಪಿನಲ್ಲಿ ಉಳಿಯುವಂಥ ಭೋಜನದ ಅನುಭವವನ್ನು ನೀಡುವಲ್ಲಿ ಸಂಸ್ಥೆ ನಂಬಿಕೆ ಇಟ್ಟಿದೆ. ಹೆಚ್ಚುತ್ತಿರುವ ಹಣದುಬ್ಬರದ ಒತ್ತಡದಲ್ಲಿ ದರಗಳ ಬಗ್ಗೆ ಚಿಂತೆಯಿಲ್ಲದೆ ಆನಂದಿಸಲು ಕುಟುಂಬಗಳಿಗೆ ಅವಕಾಶವನ್ನು ಮ್ಯಾಜಿಕ್ ಟೈಮ್ಸ್ ಮೂಲಕ ಪಿಜ್ಜಾ ಹಟ್ ಸಾದರಪಡಿಸುತ್ತಿದೆ ಎಂದರು.

ಈ ಹೊಸ ಉಪಕ್ರಮಕ್ಕಾಗಿ ಜಾಹೀರಾತು ಅಭಿಯಾನವನ್ನು ಆರಂಭಿಸಿದ್ದು, ಇದರಲ್ಲಿ ಮ್ಯಾಜಿಕ್ ಟೈಮ್ಸ್‌ನಿಂದಾಗಿ ತಮ್ಮ ತಂದೆ ಕುಟುಂಬವನ್ನು ಹೆಚ್ಚು ಬಾರಿ ಪಿಜ್ಜಾ ಹಟ್‌ಗೆ ಕರೆಯೊಯ್ಯುವುದರಿಂದ ಸಂತಸವಾಗಿರುವ ಬಾಲಕಿಯೊಬ್ಬಳನ್ನು ತೋರಿಸಲಾಗುತ್ತಿದೆ. ಅಕ್ಟೋಬರ್ 8ಕ್ಕೆ ಆರಂಭವಾಗಿರುವ ಟಿವಿ ಜಾಹೀರಾತು ಕರ್‌ದೇ ಪಾಪಾ ಕೊ ಚೇಂಜ್ ಎಂಬ ಮಾತಿನಿಂದ ಕೊನೆಗೊಳ್ಳುತ್ತದೆ.



© Samyukta Karnataka N.A.